## ಮೋಹಕ ಹಸಿರು ಹಾವು

‘ಆಗುಂಬೆ ಕಾಡಿನಲ್ಲಿ ಕಂಡ ಹಸಿರು ಚೆಲುವ’ (ಡಿ. 19, ಪ್ರಸಾದ್ ಶೆಣೈ ಆರ್.ಕೆ.) ಲೇಖನ ಮಾತ್ರವಲ್ಲ, ಚಿತ್ರಗಳೂ ಬಹಳ ಚೆನ್ನಾಗಿವೆ. ಹಸಿರು ಹಾವುಗಳ ಕುರಿತಂತೆ ಗೊತ್ತಿರದ ಹಲವು ಮಾಹಿತಿಗಳನ್ನು ಲೇಖನ ಒದಗಿಸಿತು. ಹಸಿರು ಹಾವುಗಳು ಆತಂಕ, ಭಯಗೊಂಡಾಗ ಮೈಮೇಲೆ ಬಿಳಿ ಚುಕ್ಕೆಗಳು ಏಳುತ್ತವೆ ಎಂಬ ಮಾಹಿತಿ ಅಚ್ಚರಿ ಮೂಡಿಸಿತು. ಇದು ಪಾಪದ ಪ್ರಾಣಿ ಮಾತ್ರವಲ್ಲ, ನೋಡಲು ಮೋಹಕವೂ ಹೌದು.

–ಶರಣ್ಯಾ ಚೇತನ್, ಶಿವಮೊಗ್ಗ



## ಸುಂದರ ಚಿತ್ರ-ಲೇಖನ

‘ಟಿಟಿಕಾಕ ಸರೋವರದ ತೇಲುವ ಹಳ್ಳಿಗಳು’ (ಡಿ. 19, ಡಿ.ಜಿ. ಮಲ್ಲಿಕಾರ್ಜುನ) ಚಿತ್ರ–ಲೇಖನ ಓದಿ ತುಂಬ ಖುಷಿಯಾಯಿತು. ಉರೊ ಬುಡಕಟ್ಟು ಜನರ ಬದುಕುವ ಹಂಬಲ, ಉತ್ಸಾಹ, ಜೀವನ ಕಟ್ಟಿಕೊಂಡ ರೀತಿ ಕಣ್ತೆರೆಸುವಂತಿದೆ.

–ಹುರುಕಡ್ಲಿ ಶಿವಕುಮಾರ ಬಾಚಿಗೊಂಡನಹಳ್ಳಿ

## ಸಿದ್ಧಸೂತ್ರಗಳಿಂದ ಹೊರಬರಲಿ

‘ಬೇರುಗಳಲ್ಲಿ ಹುಳು ಅಲ್ಲಲ್ಲಿ ಹೂ–ಹಣ್ಣು’ (ಡಿ. 19, ರಘುನಾಥ ಚ.ಹ.) ಕನ್ನಡ ಚಿತ್ರರಂಗದ ಏಳುಬೀಳುಗಳ ಕುರಿತ ಸವಿವರ ಲೇಖನ.

2024ರ ಅಂಚಿನಲ್ಲಿ ಕನ್ನಡ ಚಿತ್ರರಂಗ 5000 ಚಿತ್ರಗಳ ನಿರ್ಮಾಣಕ್ಕೆ ಸಾಕ್ಷಿಯಾಗಿರುವುದು ಹೆಮ್ಮೆಯ ವಿಷಯ. ಆದಾಗ್ಯೂ ಇತ್ತೀಚೆಗೆ ದೊಡ್ಡ ಬಜೆಟ್ ಸಿನಿಮಾಗಳ ಪ್ರವೇಶದಿಂದ ಸಿನಿಮಾ ವ್ಯಾಪಾರದಂತಾಗಿದೆ. ವ್ಯಾಪಾರೀಕರಣದ ಹಿನ್ನೆಲೆಯಲ್ಲಿ ತಯಾರಾಗುವ ಚಿತ್ರಗಳ ಗುಣಮಟ್ಟವನ್ನು ಹೇಳಬೇಕಿಲ್ಲ.

ನಗರೀಕರಣದಿಂದಾಗಿ ಚಿತ್ರಮಂದಿರಗಳು ಕಣ್ಮರೆಯಾಗಿ ಮಲ್ಟಿಪ್ಲೆಕ್ಸ್‌ಗಳು ತಲೆ ಎತ್ತಿರುವುದು, ಸಿನಿಮಾ ಬಿಡುಗಡೆಯಾದ ಕೆಲವೇ ದಿನಗಳಲ್ಲಿ ಒಟಿಟಿಯಲ್ಲಿ ತೆರೆಕಂಡು ಚಿತ್ರಮಂದಿರಗಳಿಗೆ ಜನ ಬಾರದಾಗಿರುವುದು ಸಿನಿಮಾರಂಗದ ಏಳಿಗೆಯನ್ನು ಕುಂಠಿತಗೊಳಿಸುತ್ತಿವೆ.

ಈಗಲಾದರೂ ‘ಹಾಡಿದ್ದೇ ಹಾಡೋ ಕಿಸಬಾಯಿ ದಾಸ’ ಅನ್ನುವಂತೆ, ನಾಲ್ಕು ಹಾಡು, ನಾಲ್ಕು ಫೈಟ್ ಮತ್ತು ಮನಸ್ಸಿನ, ಸಾಮಾಜಿಕ ಸ್ವಾಸ್ಥ್ಯ ಕೆಡಿಸುತ್ತಿರುವ ಸಂಭಾಷಣೆಯ ಭಾಷಾ ಪ್ರಯೋಗ ಇತ್ಯಾದಿಗಳನ್ನೊಳಗೊಂಡ ಚರ್ವಿತ ಚರ್ವಣ ಸಿದ್ಧಸೂತ್ರಗಳಿಂದ ಹೊರಬಂದು, ನೆರೆ ರಾಜ್ಯಗಳಿಂದ ತಾರಾ ಮೌಲ್ಯ, ಕಥಾವಸ್ತು, ಗುಣಮಟ್ಟ, ಮೌಲ್ಯಗಳ ಪ್ರತಿಪಾದನೆ, ಕೌಟುಂಬಿಕ ಹಿನ್ನೆಲೆಯಿಂದ ಮನಸೆಳೆಯುವ ಚಿತ್ರ ಸಾಹಿತ್ಯ ಮುಂತಾದ ವಿಷಯಗಳನ್ನು ಅಭ್ಯಸಿಸಿದಲ್ಲಿ ಸುಧಾರಣೆ ಕಾಣಲು ಸಾಧ್ಯ.

ಈ ನಡುವೆಯೂ ಕನ್ನಡದ ಪ್ರೇಕ್ಷಕರು ಆಗೀಗೊಮ್ಮೆ ಮಿಂಚು ಹುಳುವಿನಂತೆ ಬಂದ ಅತ್ಯುತ್ತಮ ಚಲನಚಿತ್ರಗಳನ್ನು ಆದರಿಸುತ್ತಿರುವುದೇ ಸಮಾಧಾನಕರ ಸಂಗತಿ.

–ವಿ.ಆರ್. ಮುರಲೀಧರ್, ಬೆಂಗಳೂರು




## ಬೇರು- ನೀರು

‘ಬೇರು ನೀರುಂಡಾಗ ತಣಿಯುವೆ ಭೂರುಹದ ಶಾಖೋಪಶಾಖೆಗಳು?’ ಎಂಬುದು ಕುಮಾರವ್ಯಾಸ ವಾಣಿ. ಬೇರಿಗೇ ನೀರಿಲ್ಲದಾಗ, ಹುಳು ಹಿಡಿದಾಗ ಕೊಂಬೆ ರೆಂಬೆಗಳ ಸ್ಥಿತಿಗತಿಗಳು ಆತಂಕಕ್ಕೆ ಎಡೆಗೊಡುವುದಿಲ್ಲವೇ?

–ಸಿಪಿಕೆ, ಮೈಸೂರು

## ಆತ್ಮಾವಲೋಕನದ ಸಮಯ

ಕನ್ನಡ ಚಿತ್ರರಂಗದ ಇತಿಹಾಸ ಹಾಗೂ ಹಿನ್ನೆಲೆಯನ್ನು ಇಟ್ಟುಕೊಂಡು, ವಿವಿಧ ಆಯಾಮಗಳಲ್ಲಿ, ಸಿನಿಮಾರಂಗದ ಏಳುಬೀಳುಗಳ ವಿಶ್ಲೇಷಣೆ ಮಾಡಿರುವ ಲೇಖನ ಸೊಗಸಾಗಿದೆ. ಖಂಡಿತ ಆತ್ಮಾವಲೋಕನ ಮಾಡಿಕೊಳ್ಳಬೇಕಾದ ಸಮಯ.

–ಬಿ.ವಿ. ರಾಜಲಕ್ಷ್ಮಿ

## ಕಲಾ ಪೋಷಣೆಗೆ ಅಭಿನಂದನೆ

‘ಮೂಡಲಪಾಯಕ್ಕೆ ಮರುಹುಟ್ಟು’ (ಡಿ. 19, ನಿರಂಜನ ವಾನಳ್ಳಿ) ಲೇಖನ, ಕಣ್ಮರೆಯಾಗುತ್ತಿರುವ ಕಲಾಪ್ರಕಾರದ ಜೊತೆಜೊತೆಗೆ ಮರೆಯಾಗುತ್ತಿರುವ ಸಂಸ್ಕೃತಿಯೊಂದನ್ನು ಪರಿಚಯಿಸಿತು.

ಜನಪದ ಕಲೆಗಳು ಒಂದೊಂದಾಗಿ ಕಣ್ಮರೆಯಾಗುತ್ತಿರುವ ಈ ಹೊತ್ತಿನಲ್ಲಿ ಮಂಡ್ಯ ಜಿಲ್ಲೆ ಪಾಂಡವಪುರದ ದೊಡ್ಡ ಬ್ಯಾಡರಹಳ್ಳಿ ಶಾಲಾಶಿಕ್ಷಕರು ಉತ್ಸಾಹದಿಂದ ಮಕ್ಕಳನ್ನು ಬಳಸಿಕೊಂಡು ಕರ್ಣಾರ್ಜುನ ಕಾಳಗ ಆಟ ಆಡಿಸಿದ್ದು ಶ್ಲಾಘನಾರ್ಹ. ಈ ಕಾರ್ಯಕ್ಕೆ ಬೆನ್ನೆಲುಬಾಗಿ ನಿಂತ ಜಿಲ್ಲಾ ಕನ್ನಡ ಸಂಘದ ಅಧ್ಯಕ್ಷ ಜಯಪ್ರಕಾಶ ಗೌಡರು ಹಾಗೂ ಐಆರ್‌ಎಸ್ ಅಧಿಕಾರಿ ಜಯರಾಂ ರಾಯಪುರ ಅವರ ಕಾಳಜಿಗೆ ಅಭಿನಂದನೆ.

–ಎಸ್. ವಿಶ್ವನಾಥ ಐನಹಳ್ಳಿ, ಮೈಸೂರು

## ವಾಸ್ತವಿಕ ಕಥೆ



‘ಹೀಗೊಂದು ಪ್ರಮೋಶನ್ ಪ್ರಸಂಗ’ (ಡಿ. 19, ಮಾಧವಿ ಎಸ್. ಭಂಡಾರಿ) ಕಥೆ ವಾಸ್ತವಿಕವಾಗಿದೆ. ಬ್ಯಾಂಕ್ ಹಾಗೂ ಸರ್ಕಾರಿ ಇಲಾಖೆಗಳಲ್ಲಿ ಆಗಾಗ್ಗೆ ಇಂಥ ಒಂದೇ ಹೆಸರು/ಊರಿನಲ್ಲಿ ಗೊಂದಲಗಳು ಸಾಮಾನ್ಯವಾಗಿ ಆಗುತ್ತವೆ. ಹಾಗೆಯೇ ತಪ್ಪು ಸಂದೇಶದಿಂದ ಆಭಾಸವಾಗಿ ಅವಮಾನ ಆಗಿರುವ ಪ್ರಸಂಗಗಳೂ ನಡೆಯುತ್ತಿರುತ್ತವೆ.

–ಎಂ.ಆರ್. ಚಂದ್ರಶೇಖರ್, ಬೆಂಗಳೂರು

## ಚಿತ್ತಾರ ಬಿಡಿಸುವ ಬಳ್ಳಿಗಳು!

‘ಗೋಡೆಗೆ ಹಸುರಿನ ಅಪ್ಪುಗೆ’ (ಡಿ. 19, ಸೀಮಾ ಹೆಗಡೆ) ‘ಹಸುರು ಪ್ರೀತಿ’ ಲೇಖನ ಚೆನ್ನಾಗಿದೆ. ಗೋಡೆಯ ಮೇಲೆ ಚಿತ್ತಾರ ಬಿಡಿಸಿದಂತೆ ಕಾಣುವ ಈ ಬಳ್ಳಿಗಳು ನೋಡಲು ಆಕರ್ಷಕವಷ್ಟೇ ಅಲ್ಲದೆ ಮನೆ ಒಳಗೆ ತಂಪಿನ ವಾತಾವರಣ ನೀಡುತ್ತವೆ. ವಿದೇಶಿ ಸಸ್ಯಗಳಾದರೂ ಈ ಬಳ್ಳಿಗಳಿಗೆ ಕನ್ನಡದ ಹೆಸರಿದ್ದರೆ ಚೆನ್ನಾಗಿತ್ತು.

–ಶೋಭಾ ಸಂಪತ್

## ನಮ್ಮೂರಲ್ಲೂ ತಂಡ ಕಟ್ಟಬೇಕು

‘ಊರಿಗೆ ಉಪಕಾರಿ ಶೌರ್ಯದ ಮಾದರಿ’ (ಡಿ. 12, ಕೋಡಿಬೆಟ್ಟು ರಾಜಲಕ್ಷ್ಮಿ) ಸ್ಫೂರ್ತಿದಾಯಕ ಲೇಖನ. ನನ್ನ ಊರಿನಲ್ಲಿನ ಕೆಲ ಯುವಜನರಿಗೆ ಈ ಲೇಖನವನ್ನು ಓದಿ ಹೇಳಿದೆ. ಅವರು ಕೂಡ ಇಂಥ ತಂಡ ಸೇರಲು ಹಾಗೂ ಸೇವೆ ಮಾಡಲು ಉತ್ಸುಕರಾಗಿದ್ದಾರೆ.

–ಆಶಾಲತಾ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in